# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 519 |
| ಸದಸ್ಯರ ಹೆಸರು | : | ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ |
| ಉತ್ತರಿಸುವ ದಿನಾಂಕ | : | 10-07-2023 |
| ಉತ್ತರಿಸುವ ಸಚಿವರು | : | ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯ ಹಕ್ಕು ಕಾಯ್ದೆಯಲ್ಲಿ ಬುಡಕಟ್ಟು ಸಮುದಾಯಕ್ಕೆ ಹಕ್ಕುಪತ್ರ ನೀಡಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು; (ವಿವರ ನೀಡುವುದು) | ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006 (2007ರ 2) ಮತ್ತು ನಿಯಮಗಳು -2008 (ನಿಯಮಗಳ ತಿದ್ದುಪಡಿ–2012) ರಡಿ ಅರಣ್ಯ ಹಕ್ಕು ಕಾಯ್ದೆಯಡಿಯಲ್ಲಿ ಜೂನ್-2023 ರವರಗೆ ಸಮುದಾಯ ಹಕ್ಕುಗಳ ಪ್ರಗತಿಯ ವಿವರಗಳು ಈ ಕೆಳಕಂಡಂತಿದೆ. |

| ಕ್ಲೇಮುದಾರರ ವಿವರ | ಸ್ವೀಕೃತಗೊಂಡ ಅರ್ಜಿಗಳ ಸಂಖ್ಯೆ | ವಿತರಿಸಿರುವ ಹಕ್ಕು ಪತ್ರಗಳ ಸಂಖ್ಯೆ | ವಿಸ್ತೀರ್ಣ (ಎಕರೆಗಳಲ್ಲಿ) | ಇತ್ಯರ್ಥವಾಗದೆ ಬಾಕಿ ಇರುವ ಅರ್ಜಿಗಳ ಸಂಖ್ಯೆ |
|---|---|---|---|---|
| ಸಮುದಾಯ ಹಕ್ಕುಗಳು | 5940 | 1345 | 36376.14 | 514 |

- ಎಫ್‌ಆರ್‌ಎ ಯ ಸೆಕ್ಷನ್ 3 (2) ರ ಅಡಿಯಲ್ಲಿನ ಷರತ್ತುಗಳನ್ನು ಪೂರೈಸಬೇಕು, ಅವುಗಳೆಂದರೆ:

  1. ಸೌಲಭ್ಯಗಳನ್ನು ಒಂದು ಸರ್ಕಾರಿ ಸಂಸ್ಥೆ ನಿರ್ವಹಿಸತಕ್ಕದ್ದು;
  2. ಒಂದು ಹೆಕ್ಟೇರ್‌ಗಿಂತ ಕಡಿಮೆ ಅರಣ್ಯ ಭೂಮಿಯನ್ನು ಪಲ್ಲಟಗೊಳಿಸತಕ್ಕದ್ದು;
  3. ಎಪ್ಪತ್ತೈದು ಮೀರದಂತೆ ಮರಗಳನ್ನು ಕತ್ತರಿಸುವುದು;
  4. ಗ್ರಾಮ ಸಭೆಯ ಶಿಫಾರಸ್ಸು; ಮತ್ತು
  5. ಎಫ್‌ಆರ್‌ಎ ಯ ಸೆಕ್ಷನ್ 3 (2) ಅಡಿಯಲ್ಲಿ ಪಟ್ಟಿ ಮಾಡಲಾದ ಹದಿಮೂರು ವಸ್ತುಗಳಿಗೆ ಸೀಮಿತವಾಗತಕ್ಕದ್ದು.

- ಶಿವಮೊಗ್ಗ, ಮೈಸೂರು, ರಾಮನಗರ, ಧಾರವಾಡ, ಕೊಡಗು ಮತ್ತು ಹಾವೇರಿ ಜಿಲ್ಲೆಗಳಲ್ಲಿ ಸಮುದಾಯದ ಹಕ್ಕು ಕೋರಿ ಬಂದಿರುವ ಅರ್ಜಿಗಳು ಇತ್ಯರ್ಥವಾಗದೇ ಬಾಕಿ ಇರುತ್ತವೆ.

- 2020 ಮೇ ತಿಂಗಳಿನಿಂದ ರಾಜ್ಯದಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳ ಆಯ್ಕೆಯಾಗದ ಹಿನ್ನೆಲೆಯಲ್ಲಿ ಉಪವಿಭಾಗ ಮಟ್ಟದ ಸಮಿತಿ (SDLC) ಹಾಗೂ ಜಿಲ್ಲಾ ಮಟ್ಟದ ಸಮಿತಿ (DLC) ಗಳು ಕಾರ್ಯನಿರ್ವಹಿಸದ ಕಾರಣ ಅರ್ಜಿಗಳು ಇತ್ಯರ್ಥವಾಗದೇ ಬಾಕಿ ಇರುತ್ತವೆ.

ಆ) "ಈವರೆವಿಗೂ ಹಕ್ಕುಪತ್ರ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; ವಿತರಣೆಗೆ ಬಾಕಿ ಇರುವ ಹಕ್ಕು ಪತ್ರಗಳನ್ನು ಯಾವ ಕಾಲಮಿತಿಯೊಳಗೆ ವಿತರಿಸಲಾಗುವುದು?

ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006 (2007ರ 2) ಮತ್ತು ನಿಯಮಗಳು -2008 (ನಿಯಮಗಳ ತಿದ್ದುಪಡಿ-2012) ರಡಿ ಅರಣ್ಯ ಹಕ್ಕು ಕಾಯ್ದೆಯಡಿಯಲ್ಲಿ ಜೂನ್-2023 ರವರಗೆ ಸಾಧಿಸಿರುವ ಪ್ರಗತಿಯ ವಿವರಗಳು ಈ ಕೆಳಕಂಡಂತಿದೆ.

| ಕ್ಲೇಮುದಾರರ ವಿವರ | ಸ್ವೀಕೃತಗೊಂಡ ಅರ್ಜಿಗಳ ಸಂಖ್ಯೆ | ವಿತರಿಸಿರುವ ಹಕ್ಕು ಪತ್ರಗಳ ಸಂಖ್ಯೆ | ಇತ್ಯರ್ಥವಾಗದೆ ಬಾಕಿ ಇರುವ ಅರ್ಜಿಗಳ |
|---|---|---|---|
| ಪರಿಶಿಷ್ಟ ಪಂಗಡ | 47713 | 12764 | 1983 |
| ಇತರೆ ಪಾರಂಪರಿಕ | 240710 | 2091 | 25163 |
| ಸಮುದಾಯ ಹಕ್ಕುಗಳು | 5940 | 1345 | 514 |
| **ಒಟ್ಟು** | **294363** | **16200** | **27660** |

ಅರ್ಜಿಗಳನ್ನು ಸ್ವೀಕರಿಸಲು ಯಾವುದೇ ಸಮಯದ ಮಿತಿಯಿಲ್ಲ. ಅರಣ್ಯ ಹಕ್ಕುಗಳ ನಿಯಮಗಳ ಪ್ರಕಾರ ಅದರಲ್ಲೂ ನಿಯಮ 11 (1) (ಎ) ಗೆ ಅನುಗುಣವಾಗಿ ಗ್ರಾಮ ಸಭೆಗಳ ಅರ್ಜಿಗಳನ್ನು ಕುರಿತು ಪ್ರಕ್ರಿಯೆ ನಡೆಸಬೇಕಾಗಿದೆ. ಸದರಿ ಉಪಬಂಧದ ಪ್ರಕಾರ ಗ್ರಾಮ ಸಭೆಯು ಹಕ್ಕು ಕೋರಿಕೆ ಅರ್ಜಿಗಳಿಗಾಗಿ ಕರೆ ನೀಡುತ್ತದೆ ಮತ್ತು ಹಕ್ಕು ಕೋರಿಕೆಗಳನ್ನು ಸ್ವೀಕರಿಸಲು ಅರಣ್ಯ ಹಕ್ಕುಗಳ ಸಮಿತಿಗೆ ಅಧಿಕಾರಿ ನೀಡುತ್ತದೆ. ವೈಯಕ್ತಿಕ ಅಥವಾ ಸಮುದಾಯ ಅರಣ್ಯ ಹಕ್ಕುಗಳ ಅಥವಾ ಅವೆರೆಡರ ಸ್ವರೂಪ ಮತ್ತು ವ್ಯಾಪ್ತಿಯನ್ನು ನಿರ್ಧರಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸುವ ಪ್ರಾಧಿಕಾರ ಗ್ರಾಮಸಭೆಗೆ ಇರುವುದರಿಂದ, ಪ್ರಕ್ರಿಯೆಯನ್ನು ಪ್ರಾರಂಭಿಸುವ ಕಾರ್ಯವನ್ನು ಗ್ರಾಮಸಭೆ ಮಾಡಬೇಕೇ ಹೊರತು ಅರಣ್ಯ ಹಕ್ಕುಗಳ ಸಮಿತಿಯಲ್ಲ.

ಹಕ್ಕು ಕೋರಿಕೆಗಳಿಗಾಗಿ ಹಾಗೆ ಅರ್ಜಿಗಳನ್ನು ಕರೆದ ದಿನಾಂಕದಿಂದ ಮೂರು ತಿಂಗಳ ಒಂದು ಅವಧಿಯೊಳಗೆ ಅಂತಹ ಹಕ್ಕು ಕೋರಿಕೆಗಳನ್ನು ಮಾಡಬೇಕಾಗುತ್ತದೆ. ಗ್ರಾಮ ಸಭೆಯು ಅಗತ್ಯವಿದ್ದರೆ, ತಾನು ಅವಧಿಯನ್ನು ವಿಸ್ತರಿಸುತ್ತಿರುವ ಕಾರಣಗಳನ್ನು ದಾಖಲಿಸಿದ ನಂತರ ಅಂತಹ ಅವಧಿಯನ್ನು ವಿಸ್ತರಿಸಬಹುದು.

ಅರಣ್ಯ ಹಕ್ಕುಗಳ ಅಧಿನಿಯಮ (ಎಫ್‌ಆರ್‌ಎ) ದೇಶದ ಬಡ ಮತ್ತು ಕಡುಬಡವರಾದ ಜನರ ಹಕ್ಕುಗಳನ್ನು ಮನ್ನಣೆ ಮಾಡುವ ಉದ್ದೇಶವನ್ನು ಹೊಂದಿದೆ. ಅಂತಹ ಸಮುದಾಯಗಳು ಅನೇಕ ಬಾರಿ ಈ ಶಾಸನದ ಅಸ್ತಿತ್ವದ ಬಗ್ಗೆ ದೀರ್ಘಕಾಲದವರೆಗೆ ತಿಳಿದಿರುವುದಿಲ್ಲ. ಕಟ್ ಆಫ್ ದಿನಾಂಕವನ್ನು ಹೇರುವುದು ರಾಜ್ಯ ಆಡಳಿತ ಯಂತ್ರವು ಅವರಿಗೆ ಅವರುಗಳ ಹಕ್ಕುಗಳನ್ನು ತಿಳಿಸುವಲ್ಲಿ ವಿಫಲವಾದ ಕಾರಣಕ್ಕಾಗಿ ಅವರಿಗೆ ದಂಡ ವಿಧಿಸಿದಂತಾಗುತ್ತದೆ.

ಎಫ್‌ಆರ್‌ಎ ಅನುಷ್ಠಾನಕ್ಕಾಗಿ ಮಾಡಬೇಕಾದ ಕೆಲಸದ ಪ್ರಮಾಣವನ್ನು ಗ್ರಾಮಸಭೆಯು ನಿರ್ಣಯಿಸಬೇಕಾಗಿರುವುದರಿಂದ, ತನ್ನದೇ ಆದ ಕಟ್ ಆಫ್ ದಿನಾಂಕವನ್ನು ನಿರ್ಧರಿಸುವುದಕ್ಕೆ ಗ್ರಾಮಸಭೆಯೇ ಸೂಕ್ತ ಸಂಸ್ಥೆಯಾಗಿದೆ.

**ಸಕಇ-ಎಸ್‌ಟಿಪಿ/97/2023**

(ಬಿ.ನಾಗೇಂದ್ರ)
ಪರಿಶಿಷ್ಟ ಪಂಗಡಗಳ ಕಲ್ಯಾಣ,
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.